ದಿನಾಂಕ 30-3-2010 ರಂದು ಬೆಳಿಗ್ಗೆ 11.00 ಗಂಟೆಗೆ ಹೈ.ಕ.ಪ್ರ. ಮಂಡಳಿ ಗುಲಬರ್ಗಾ ಕಾರ್ಯಾಲಯ ಸಭಾಂಗಣದಲ್ಲಿ ಜರುಗುವ ಹೈದ್ರಾಬಾದ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ, 2009-10ನೇ ಸಾಲಿನ ದ್ವಿತೀಯ ಸರ್ವ ಸದಸ್ಯರ ಸಭೆಯ ವಿಷಯ ಸೂಚಿ ಮತ್ತು ಟಿಪ್ಪಣಿ.


| ಕ್ರ.ಸಂ. | ವಿವರ | ಪುಟ ಸಂಖ್ಯೆ |
|---|---|---|
| 1 | 2 | 3 |
| I. | ದಿನಾಂಕ 3-6-2009 ರಂದು ಗುಲಬರ್ಗಾದಲ್ಲಿ ಜರುಗಿದ ಹೈ.ಕ.ಪ್ರ. ಮಂಡಳಿಯ 2009-10ನೇ ಸಾಲಿನ ಪ್ರಥಮ ಸಭೆಯ ನಡುವಳಿಕೆಗಳು ಮೇಲಿನ ಪಾಲನಾ ವರದಿ | 1-3 |
| II. | ದಿನಾಂಕ 30-3-2010 ರಂದು ನಡೆಯುವ ಮಂಡಳಿಯ, 2009-10ನೇ ಸಾಲಿನ ದ್ವಿತೀಯ ಸರ್ವ ಸದಸ್ಯರ ಸಭೆಯ ವಿಷಯ ಸೂಚಿ ಮತ್ತು ಟಿಪ್ಪಣಿ. | |
| 1. | ಹೈ. ಕ. ಪ್ರ. ಮಂಡಳಿಯ 2009-10ನೇ ಸಾಲಿನ ಕ್ರಿಯಾ ಯೋಜನೆಗೆ ಘಟನೋತ್ತರ ಅನುಮೋದನೆ ಬಗ್ಗೆ | 4-5 |
| 2. | 2008-09ನೇ ಸಾಲಿನ ವಾರ್ಷಿಕ ಲೆಕ್ಕ ಪತ್ರಗಳ ಅನುಮೋದನೆ | 5 |
| 3. | ಗುಲಬರ್ಗಾ ನಗರದಲ್ಲಿ ಮಂಜೂರಾದ ಐ.ಟಿ.ಪಾರ್ಕ ಅತಿ ಶೀಘ್ರದಲ್ಲಿ ಸ್ಥಾಪನೆ ಮಾಡಿ ಕಾರ್ಯಗತಗೊಳಿಸಲು ಮಂಡಳಿಯಿಂದ ರೂ. 2.00 ಕೋಟಿ ಅನುದಾನ ಒದಗಿಸಿ ಕೊಡುವ ಕುರಿತು. | 6 |
| 4. | ಮಂಡಳಿಯ ಅಭಿವೃದ್ಧಿ ಕಾಮಗಾರಿಗಳನ್ನು ಸಕಾಲದಲ್ಲಿ ಹಾಗೂ ಗುಣಮಟ್ಟದ್ದಾಗಿ ಪೂರ್ಣಗೊಳಿಸಲು ಮಂಡಳಿಯಲ್ಲಿ 5 ಸಹಾಯಕ ಅಭಿಯಂತರರ ಹುದ್ದೆಗಳನ್ನು ಮಂಜೂರು ಮಾಡುವ ಬಗ್ಗೆ. | 6-7 |
| 5. | ಅಭಿಯಂತರರ ಸೇವೆಗಳನ್ನು ಪಡೆಯುವ ಕುರಿತು | 7 |
| 6. | ಹೈ. ಕ. ಪ್ರದೇಶಕ್ಕೆ " **ಕಲ್ಯಾಣ ಕರ್ನಾಟಕ** " ವೆಂದು ನಾಮಕರಣ ಮಾಡುವ ಕುರಿತು. | 7 |
| 7. | ಭಾರತ ಸಂವಿಧಾನದ ಕಲಂ 371 ಕ್ಕೆ ತಿದ್ದುಪಡಿ ತರಲು ರಾಜ್ಯ ಸರಕಾರಕ್ಕೆ ಮನವಿ ಕುರಿತು | 8 |
| 8. | ಹೈ. ಕ. ಪ್ರ. ಮಂಡಳಿಯಿಂದ ತೆಗೆದುಕೊಳ್ಳುವ ಕಾಮಗಾರಿಗಳಿಗೆ ತುಂಡು ಗುತ್ತಿಗೆ ಮಂಜೂರಾತಿ ನೀಡುವ ಅಧಿಕಾರದ ಮರು ಹಂಚಿಕೆಯ ಬಗ್ಗೆ | 8 |
| 9. | ಸಹಕಾರಿ ಸಕ್ಕರೆ ಕಾರ್ಖಾನೆ ಹಳ್ಳಿಖೇಡ ಬೀದರ್, ಭೂಸನೂರ ಹಾಗೂ ನೂಲಿನ ಗಿರಣಿ ರಾಯಚೂರು ಇವರಿಗೆ ಬಿಡುಗಡೆ ಮಾಡಿರುವ ಸಾಲ ವಸೂಲಾತಿಯ ಬಗ್ಗೆ. | 9 |
| 10. | ಮಂಡಳಿಯ ಅನುದಾನದಲ್ಲಿ ನಿರ್ಮಾಣಗೊಂಡ ಸಮುದಾಯ ಭವನಗಳ ಕುರಿತು | 9 |
| 11. | 2010-11ನೇ ಸಾಲಿಗಾಗಿ ಒದಗಿಸಿಕೊಟ್ಟ ರೂ. 2300.00 ಲಕ್ಷ ಮೊತ್ತದ ಕ್ರಿಯಾ ಯೋಜನೆ ತಯಾರಿಸುವ ಕುರಿತು. | 10 |
| 12. | ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರೆ ವಿಷಯಗಳು. | 10 |


sub

ದಿನಾಂಕ 3-6-2009 ರಂದು ಬೆಳಿಗ್ಗೆ 11-00 ಗಂಟೆಗೆ ಸನ್ಮಾನ್ಯ ಶ್ರೀ ಅಮರನಾಥ ಎನ್. ಪಾಟೀಲ, ಅಧ್ಯಕ್ಷರು, ಹೈದ್ರಾಬಾದ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ, ಗುಲಬರ್ಗಾ ಇವರ ಅಧ್ಯಕ್ಷತೆಯಲ್ಲಿ ಹೈ.ಕ.ಪ್ರ. ಮಂಡಳಿಯ ಸಭಾಂಗಣದಲ್ಲಿ ಜರುಗಿದ 2009-10ನೇ ಸಾಲಿನ ಪ್ರಥಮ ಸರ್ವ ಸದಸ್ಯರ ಸಭೆಯ ನಡುವಳಿಕೆಗಳ ಮೇಲಿನ ಅನುಪಾಲನಾ ವರದಿ.

--=0=--

**ವಿಷಯ - I** ದಿನಾಂಕ 08-12-2008 ರಂದು ಜರುಗಿದ 2008-09ನೇ ಸಾಲಿನ ದ್ವಿತಿಯ ಸರ್ವ ಸದಸ್ಯರ ಸಭೆಯ ಅನುಪಾಲನಾ ವರದಿಯಲ್ಲಿನ ಬಾಕಿ ಉಳಿದ ಕಾಮಗಾರಿಗಳ ಬಗ್ಗೆ **ಚರ್ಚಿಸಿ ಮಂಡಳಿಯ ಸರ್ವ ಸದಸ್ಯರು ಈ ಕೆಳಕಂಡ ಅಂಶಗಳ ಮೇಲೆ ಸರ್ವಾನುಮತದಿಂದ ಒಪ್ಪಿಗೆ ಸೂಚಿಸಿದರು.**

**ನಡುವಳಿ - 1.1** ಮಂಡಳಿಯ ಕ್ರೀಯಾ ಯೋಜನೆಯಲ್ಲಿ ಮುಂದುವರೆದ ಕಾಮಗಾರಿಗಳನ್ನು ಜುಲೈ 2009 ರ ಒಳಗೆ ಪೂರ್ಣಗೊಳಿಸದೆ ಇರುವ ಅನುಷ್ಠಾನ ಅಧಿಕಾರಿಗಳ ಮೇಲೆ ತೀವ್ರ ಶಿಸ್ತಿನ ಕ್ರಮ ಜರುಗಿಸಿ ಅವರ ಸ್ವಂತ ಜವಾಬ್ದಾರಿಯ ಮೇಲೆ ಕಾಮಗಾರಿಗಳನ್ನು ಪೂರ್ಣಗೊಳಿಸುವುದು.

**ಅನುಪಾಲನೆ - 1.1** ಹೈದ್ರಾಬಾದ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ ಕ್ರೀಯಾ ಯೋಜನೆಯಲ್ಲಿ ಮುಂದುವರೆದು ಬಾಕಿ ಉಳಿದ 70 ಕುಂಠಿತ ಕಾಮಗಾರಿಗಳಲ್ಲಿ 64 ಕಾಮಗಾರಿಗಳನ್ನು ಭೌತೀಕ ಮತ್ತು ಆರ್ಥಿಕವಾಗಿ ಪೂರ್ಣಗೊಳಿಸಿ, ವಿವಿಧ ಕಾರಣಗಳಿಂದಾಗಿ ಪ್ರಾರಂಭಿಸಲು ಸಾಧ್ಯವಾಗದೆ ಇರುವ 06 ಕಾಮಗಾರಿಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಅನುಷ್ಠಾನ ಅಧಿಕಾರಿಗಳ ವರದಿಯ ಆಧಾರದ ಮೇಲೆ ಕ್ರೀಯಾ ಯೋಜನೆಯಿಂದ ಕಾಮಗಾರಿಗಳನ್ನು ಕೈಬಿಡಲಾಗಿದೆ.

**ನಡುವಳಿ - 1.2** **ಹೊಸ ಕಾಮಗಾರಿಗಳಿಗೆ ಮಂಡಳಿಯ ಅನುಮೋದನೆ ಪಡೆದ ನಂತರ ಇನ್ನೊಮ್ಮೆ ಆಡಳಿತಾತ್ಮಕ ಅನುಮೋದನೆ ಪಡೆಯುವುದು ಅನಾವಶ್ಯಕ. ಕಾರಣ ಮಂಡಳಿಯ ಅನುಮೋದನೆ ಪಡೆದ ತಕ್ಷಣದಿಂದ ಅನುಷ್ಠಾನ ಅಧಿಕಾರಿಗಳು ಕಾಮಗಾರಿಗಳನ್ನು ಪ್ರಾರಂಭಿಸುವುದು.**

**ಅನುಪಾಲನೆ - 1.2** ಹೈದ್ರಾಬಾದ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ ಸುತ್ತೋಲೆ ಸಂಖ್ಯೆ: ಹೈಕಮಂ/ಎ-1/32/2009-10/802 ದಿನಾಂಕ 30-6-2009 ಹಾಗೂ ಸ್ಪಷ್ಟೀಕರಣ ದಿನಾಂಕ 17/18-7-2009 ರ ಮೂಲಕ ಮಂಡಳಿಯಿಂದ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ವಹಿಸಿಕೊಟ್ಟ ಆದೇಶವನ್ನೆ ಆಡಳಿತಾತ್ಮಕ ಅನುಮೊದನೆ ಆದೇಶವೆಂದು ಪರಿಗಣಿಸಿ, ಸಕ್ಷಮ ಪ್ರಾಧಿಕಾರದಿಂದ ವಿವರವಾದ ಅಂದಾಜು ಪಟ್ಟಿಗಳಿಗೆ ತಾಂತ್ರಿಕ ಮಂಜೂರಾತಿಯನ್ನು ಪಡೆದು ಕಾಮಗಾರಿಯನ್ನು ಪ್ರಾರಂಭಿಸಲು ಹಾಗೂ ಅದರ ಪ್ರತಿಯನ್ನು ಈ ಕಾರ್ಯಾಲಯಕ್ಕೆ ಸಲ್ಲಿಸುವಂತೆ ಸೂಚಿಸಿ ಅಧಿಕಾರವನ್ನು ಪ್ರತ್ಯಾಯೋಜಿಸಲಾಗಿದೆ.

| | |
|---|---|
| ನಡುವಳಿ – 1.3 | ಜಿಲ್ಲಾ ಪಂಚಾಯತ್ ಕಾರ್ಯನಿರ್ವಾಹಕ ಅಭಿಯಂತರರು, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಹಾಗೂ ಸಹಾಯಕ ಅಭಿಯಂತರರುಗಳಿಗೆ ಈಗಾಗಲೇ ಸರ್ಕಾರದಿಂದ ಎನ್.ಆರ್.ಇ.ಜಿ.ಎ. ಯೋಜನೆ ಅಡಿಯಲ್ಲಿ ಆಡಳಿತ ಅಧಿಕಾರ ವಿಕೇಂದ್ರಿಕರಣ ಪ್ರಕಾರ ರೂ.10.00 ಲಕ್ಷಗಳ ಕಾಮಗಾರಿಗಳನ್ನು ನಿರ್ವಹಿಸಲು ಅಧಿಕಾರ ನೀಡಿರುವ ಪ್ರಯುಕ್ತ ಮಂಡಳಿಯ ಕಾಮಗಾರಿಗಳಿಗೂ ಅನ್ವಯಿಸುವುದು. |
| ಅನುಪಾಲನೆ – 1.3 | ಹೈದ್ರಾಬಾದ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಪತ್ರ ಸಂಖ್ಯೆ:ಹೈಕಮಂ/ಯೋ-2/5/2009-10/1410 ದಿನಾಂಕ 27/28-8-2009 ರ ಮೂಲಕ ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ರವರಿಗೆ ಅವಶ್ಯಕತೆಗೆ ಅನುಗುಣವಾಗಿ ಗರಿಷ್ಠ 30% ಎನ್.ಆರ್.ಇ.ಜಿ.ಎ. ಅನುದಾನವನ್ನು ಮಂಡಳಿಯ ಕಾಮಗಾರಿಗಳಿಗೆ ಉಪಯೋಗಿಸಿಕೊಳ್ಳಲು ಸೂಕ್ತ ನಿರ್ದೇಶನ ನೀಡಲಾಗಿದೆ. |
| ನಡುವಳಿ – 1.4 | ಕಾಮಗಾರಿಗಳ ಬದಲಾವಣೆಗೆ ಸರ್ಕಾರಕ್ಕೆ ಕಳಿಸುವ ವಿಧಾನದಲ್ಲಿ ಬದಲಾವಣೆಯನ್ನು ತಂದು ಮಂಡಳಿಯಲ್ಲೆ ನಿರ್ಧರಿಸಿ ವಿಳಂಬವನ್ನು ತಪ್ಪಿಸುವುದು. |
| ಅನುಪಾಲನೆ – 1.4 | ಸರ್ಕಾರದ ಆದೇಶ ಸಂಖ್ಯೆ: ಪಿಡಿ/66/ಹೆಚ್‌ಕೆಡಿಬಿ/2006 ದಿನಾಂಕ 19-1-2007 ರ ಆದೇಶದನ್ವಯ ಒಂದೆ ವಲಯಕ್ಕೆ ಸೇರಿರುವ ರೂ.5.00 ಲಕ್ಷ ಮೊತ್ತದ ವರೆಗಿನ ಕಾಮಗಾರಿಗಳಿಗೆ ಮಂಡಳಿಯ ಹಂತದಲ್ಲಿ ಕಾಮಗಾರಿ ಬದಲಾವಣೆಗೆ ಅನುಮೋದನೆ ನೀಡಲಾಗುತ್ತಿದೆ. ಕೇವಲ ರೂ.5.00 ಲಕ್ಷಕ್ಕಿಂತ ಹೆಚ್ಚಿನ ಹಾಗೂ ಬೇರೆ ವಲಯಕ್ಕೆ ಸೇರಿರುವ ಕಾಮಗಾರಿಗಳ ಬದಲಾವಣೆ ಪ್ರಸ್ತಾವನೆಗಳು ಮಾತ್ರ ಸರ್ಕಾರದ ಅನುಮೋದನೆಗಾಗಿ ಸಲ್ಲಿಸಲಾಗುತ್ತಿದೆ. |
| ನಡವಳಿ – 1.5 | ಲೋಕೋಪಯೋಗಿ ಇಲಾಖೆಯ ಬಿಲ್ಲುಗಳ ಪಾವತಿಯನ್ನು ಆಯಾ ಜಿಲ್ಲೆಗಳ ಕಾರ್ಯನಿರ್ವಾಹಕ ಅಭಿಯಂತರರುಗಳ ಮುಖಾಂತರವೇ ಮಾಡುವುದು. |
| ಅನುಪಾಲನೆ – 1.5 | ಮಂಡಳಿಯ ಅನುಷ್ಠಾನ ಅಧಿಕಾರಿಗಳ ಸಭೆಯಲ್ಲಿ ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ, ಬಂದರು, ಒಳನಾಡು ಮತ್ತು ಜಲಸಾರಿಗೆ ಇಲಾಖೆ ಇವರಿಗೆ 2009-10ನೇ ಸಾಲಿನಲ್ಲಿ ಮಂಜೂರಾದ ಕಾಮಗಾರಿಗಳಿಗೆ ಅನುದಾನ ಬಿಡುಗಡೆಗಾಗಿ "ಅನುದಾನ ಬೇಡಿಕೆ ಪತ್ರ" (G.I.A.) ಸಲ್ಲಿಸುವಂತೆ ಸೂಚಿಸಲಾಗಿದೆ. |
| ನಡವಳಿ – 1.6 | ಸರ್ಕಾರದ ಯೋಜನೆ ಹಾಗೂ ಹಣಕಾಸು ಇಲಾಖೆಯ ಪ್ರತಿನಿಧಿಗಳು ಕಡ್ಡಾಯವಾಗಿ ಮಂಡಳಿಯ ಸಭೆಯಲ್ಲಿ ಹಾಜರಾಗುವುದು. |
| ಅನುಪಾಲನೆ – 1.6 | ಹೈದ್ರಾಬಾದ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಕರೆಯಲಾಗುವ ಸರ್ವ ಸದಸ್ಯರ ಸಭೆಯಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಯೋಜನೆ ಮತ್ತು ಹಣಕಾಸು ಇಲಾಖೆ ರವರಿಗೆ ಭಾಗವಹಿಸಲು ಅಹ್ವಾನ ಪತ್ರಗಳು ಸಲ್ಲಿಸಲಾಗಿದೆ. |

ವಿಷಯ – I I

ಹೈದ್ರಾಬಾದ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ 2009–10ನೇ ಸಾಲಿನ ಕ್ರಿಯಾ ಯೋಜನೆಗೆ ಅನುಮೋದನೆ ಬಗ್ಗೆ.

ನಡವಳಿ – 1.1

ಸರ್ಕಾರವು 2009–10ನೇ ಸಾಲಿಗಾಗಿ ಒದಗಿಸಿದ ಅನುದಾನ ರೂ.21.00 ಕೋಟಿ ಹಣದಲ್ಲಿ ವಿಶೇಷ ಘಟಕ ಯೋಜನೆ, ಗಿರಿಜನ ಉಪಯೋಜನೆ ಹಾಗೂ ನಬಾರ್ಡ ಕಾಮಗಾರಿಗಳಿಗಾಗಿ ನಿಗಧಿ ಪಡಿಸಿದ ಅನುದಾನ ರೂ.8.60 ಕೋಟಿ ಹೊರತುಪಡಿಸಿ ಉಳಿದ ಹಣದಲ್ಲಿ ಹೊಸ ಕಾಮಗಾರಿಗಳನ್ನು ತೆಗೆದುಕೊಳ್ಳುವ ಅವಕಾಶ ಇರದೆ ಇದ್ದ ಪ್ರಯುಕ್ತ ಸನ್ಮಾನ್ಯ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಕೂಡಲೆ ಸಭೆ ಕರೆದು ರೂ.60.00 ಕೋಟಿ ಅನುದಾನ ಹೆಚ್ಚುವರಿಯಾಗಿ ಮಂಜೂರು ಮಾಡುವಂತೆ ಒತ್ತಾಯಿಸಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು ಹಾಗೂ ಸಭೆಯು ಮುಂದೂಡಲಾಯಿತು.

ಅನುಪಾಲನೆ – 1.1

ಸರ್ಕಾರವು ಆಯವ್ಯಯದಲ್ಲಿ ಮಂಡಳಿಗೆ 2009–10ನೇ ಸಾಲಿಗಾಗಿ ಒದಗಿಸಿದ ರೂ.21.00 ಕೋಟಿ ಅನುದಾನದಲ್ಲಿ ವಿಶೇಷ ಘಟಕ ಯೋಜನೆ, ಗಿರಿಜನ ಉಪಯೋಜನೆ ಹಾಗೂ ನಬಾರ್ಡ ಕಾಮಗಾರಿಗಳಿಗಾಗಿ ನಿಗಧಿ ಪಡಿಸಿದ ಅನುದಾನ ರೂ.8.60 ಕೋಟಿ ಅಲ್ಲದೆ ಉಳಿದ ಹಣದಲ್ಲಿ ಸರ್ಕಾರದ ಪತ್ರ ಸಂಖ್ಯೆ: ಯೋಇ/32/ಹೈಕಮಂ/2009 ದಿನಾಂಕ 12–6–2009 ರನ್ವಯ ಪ್ರತಿಶತ 50 ರಷ್ಟು ಅನುದಾನವನ್ನು (ಅಂದರೆ ರೂ.5.00 ಕೋಟಿ) ಹೊಸ ಕಾಮಗಾರಿಗಳಿಗೆ ಒದಗಿಸಿಕೊಟ್ಟು ಒಟ್ಟು ರೂ&.13.60 ಕೋಟಿ ಅನುದಾನದಲ್ಲಿ 42 ವಿಧಾನಸಭಾ ಕ್ಷೇತ್ರಗಳಿಗೆ ಸಮನಾಗಿ ಹಂಚಿಕೆ ಮಾಡಿ ಮಾನ್ಯ ಶಾಸಕರಿಂದ ಪ್ರಸ್ತಾವನೆ ಪಡೆದು ಕಾಮಗಾರಿಗಳಿಗೆ ಮಂಜೂರಾತಿ ನೀಡಲಾಗಿದೆ.

ಮಂಡಳಿಯ ಅಧ್ಯಕ್ಷರ ಮನವಿಯ ಮೇರೆಗೆ ದಿನಾಂಕ 27–8–2009 ರಂದು ಗುಲಬರ್ಗಾದಲ್ಲಿ ಜರುಗಿದ ಸಚಿವ ಸಂಪುಟ ಸಭೆಯಲ್ಲಿ ರೂ.10.00 ಕೋಟಿ ಅನುದಾನ ಹೆಚ್ಚುವರಿಯಾಗಿ ಮಂಜೂರು ಮಾಡಿರುತ್ತಾರೆ. ಸರ್ಕಾರದ ಪತ್ರ ಸಂಖ್ಯೆ: ಎಫ್‌ಡಿ/57/ಬಿಆರ್‌ಎಸ್/2009 ದಿನಾಂಕ 5–9–2009 ರ ಮೂಲಕ ಮಂಡಳಿಯ ಮುಂದುವರಿದ ಕಾಮಗಾರಿಗಳಿಗೆ ಉಪಯೋಗಿಸಿಕೊಳ್ಳಲು ನೀಡಿದ ಸೂಚನೆಯ ಮೇರೆಗೆ ಕ್ರಮ ಜರುಗಿಸಲಾಗಿದೆ.

II) ದಿನಾಂಕ 30-3-2010 ರಂದು ಬೆಳಿಗೆ 11-00 ಗಂಟೆಗೆ ಹೈದಾಬಾದ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಗುಲಬರ್ಗಾ ಕಾರ್ಯಾಲಯ ಸಭಾಂಗಣದಲ್ಲಿ ನಡೆಯುವ ಮಂಡಳಿಯ 2009-10 ನೇ ಸಾಲಿನ ದ್ವಿತಿಯ ಸರ್ವ ಸದಸ್ಯರ ಸಭೆಯ ವಿಷಯಸೂಚಿ ಹಾಗೂ ಟಿಪ್ಪಣಿ.

ವಿಷಯ – 1 ಹೈದ್ರಾಬಾದ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ 2009-2010 ನೇ ಸಾಲಿನ ಕ್ರಿಯಾ ಯೋಜನೆಗೆ ಘಟನೋತ್ತರ ಅನುಮೋದನೆ ಬಗ್ಗೆ.

ಟಿಪ್ಪಣಿ – 1 ದಿನಾಂಕ 1-4-2009 ರಂದು ಮಂಡಳಿಯ ಬಳಿ ಖರ್ಚಾಗದೆ ಬಾಕಿ ಉಳಿದಿರುವ ರೂ. 3020.85 ಲಕ್ಷವಿದ್ದು ಸರ್ಕಾರವು 2009-10 ನೇ ಸಾಲಿಗಾಗಿ ಆಯವ್ಯಯದಲ್ಲಿ ಮಂಡಳಿಗೆ ನಿಗದಿಪಡಿಸಿದ ನಿವ್ವಳ ಅನುದಾನ ರೂ. 2100-00 ಲಕ್ಷ ಸೇರಿ ಒಟ್ಟು ರೂ. 5120.85 ಲಕ್ಷ ಅನುದಾನ ಲಭ್ಯವಿರುತ್ತದೆ. ಸರ್ಕಾರದ ಪತ್ರ ಸಂಖ್ಯೆ:ಯೋಇ/32/ಹೈಕಪ್ರಮಂ/2009 ದಿನಾಂಕ 12-6-2009 ರ ನಿರ್ದೇಶದನ್ವಯ 2009-10 ನೇ ಸಾಲಿಗಾಗಿ ಮಂಡಳಿಗೆ ನಿಗದಿ ಪಡಿಸಿದ ಅನುದಾನದಲ್ಲಿ 50% ಅನುದಾನ ಹೊಸ ಕಾಮಗಾರಿಗಳಿಗೆ ಮೀಸಲಿಟ್ಟು ಉಳಿದ ಅನುದಾನದ ಈ ಕೆಳಗಿನಂತೆ ಉಪಯೋಗಿಸಲು ಕ್ರಿಯಾ ಯೋಜನೆ ತಯಾರಿಸಿ ಮಂಡಳಿಯ ಪತ್ರ ಸಂಖ್ಯೆ:ಹೈಕಪ್ರಮಂ/ಯೋ-2/05/2009-10 2026 ದಿನಾಂಕ 16-11-2009 ರ ಮೂಲಕ ಸರ್ಕಾರದ ಅನುಮೋದನೆಗಾಗಿ ಸಲ್ಲಿಸಲಾಗಿದೆ.

| ಕ್ರ. ಸಂ. | ಲಭ್ಯವಾಗುವ ಮೊತ್ತ | ರೂ. ಲಕ್ಷಗಳಲ್ಲಿ | ವೆಚ್ಚದ ವಿವರ | ರೂ. ಲಕ್ಷಗಳಲ್ಲಿ |
|---|---|---|---|---|
| 1] | ದಿನಾಂಕ 1-4-2009 ಕ್ಕೆ ಮಂಡಳಿಯ ಮತ್ತು ಅನುಷ್ಠಾನ ಅಧಿಕಾರಿಗಳ ಬಳಿ ಉಳಿದಿರುವ ಶಿಲ್ಕು | 3020-85 | 1] ಮುಂದುವರೆದ ಮಂಡಳಿಯ 1645 ಕಾಮಗಾರಿಗಳಿಗೆ (ಟೆಂಡರ ಪ್ರೀಮಿಯಂ ಮೊತ್ತ ಸೇರಿ) | 3430-48 |
| 2] | 2009-10 ನೇ ಸಾಲಿಗಾಗಿ ಸರ್ಕಾರವು ಆಯವ್ಯಯದಲ್ಲಿ ಒದಗಿಸಿ ನಿವ್ವಳ ಅನುದಾನ | 2100-00 | 2] ಸರ್ಕಾರದ ವಿವೇಚನಾ ನಿಧಿಗಾಗಿ | 105-00 |
| | | | 3] ಅಧ್ಯಕ್ಷರ ವಿವೇಚನಾ ನಿಧಿಗಾಗಿ | 105-00 |
| | | | 4] ಶಾಸಕರು ಪ್ರಸ್ತಾಪಿಸಿದ ಹೊಸ ಕಾಮಗಾರಿಗಳಿಗೆ (ಪ್ರತಿ ವಿಧಾನ ಸಭಾ ಕ್ಷೇತ್ರಕ್ಕೆ ರೂ. 11.90 ಲಕ್ಷದಂತೆ (11.90X42) ಹಾಗೂ ಟೆಂಡರ ಪ್ರಿಮಿಯಂ ಮೊತ್ತ ಸೇರಿ) | 500-00 |
| | | | 5] ನಬಾರ್ಡ ಲೆಕ್ಕ ಶೀರ್ಷಿಕೆಯಲ್ಲಿ ಒದಗಿಸಿದ ಅನುದಾನದಲ್ಲಿ ಮಂಡಳಿಯಿಂದ ಹಮ್ಮಿಕೊಳ್ಳಬೇಕಾದ ಅಭಿವೃದ್ಧಿ ಕಾಮಗಾರಿಗಳಿಗೆ | 310-00 |
| | | | 6] ವಿಶೇಷ ಘಟಕ ಯೋಜನೆಯ ಹೊಸ ಅಭಿವೃದ್ಧಿ ಕಾಮಗಾರಿಗಳಿಗೆ | 437-36 |
| | | | 7] ಗಿರಿಜನ ಉಪ ಯೋಜನೆಯ ಹೊಸ ಅಭಿವೃದ್ಧಿ ಕಾಮಗಾರಿಗಳಿಗೆ | 113-01 |
| | | | 8] ಆಡಳಿತ ವೆಚ್ಚಕ್ಕಾಗಿ | 130-00 |
| | ಒಟ್ಟು | 5120-85 | ಒಟ್ಟು | 5120-85 |

ಶಾ:

ಮಂಡಳಿಯ ಪತ್ರ ಸಂಖ್ಯೆ/ಹೈಕಪ್ರಮಂ/ಯೋ-2/05/2009-10/657 ದಿನಾಂಕ 18-6-2009 ರ ಮೂಲಕ ಮಂಡಳಿಯ ಹೊಸ ಕಾಮಗಾರಿಗಳಿಗೆ ರೂ. 500.00 ಲಕ್ಷ, ವಿಶೇಷ ಘಟಕ ಯೋಜನೆಗಳಿಗೆ ರೂ. 437.36 ಲಕ್ಷ, ಗಿರಿಜನ ಉಪ ಯೋಜನೆಗಳಿಗೆ ರೂ. 113.01 ಲಕ್ಷ ಮತ್ತು ನಬಾರ್ಡ ಯೋಜನೆಗಳಿಗೆ ರೂ. 310.00 ಲಕ್ಷಗಳಂತೆ ಒದಗಿಸಿ ಕೊಟ್ಟಿರುವ ಅನುದಾನವನ್ನು 42 ವಿಧಾನ ಸಭಾ ಕ್ಷೇತ್ರದಲ್ಲಿ ಕೆಳಕಂಡಂತೆ ಹಂಚಿಕೆ ಮಾಡಿ ಮಾನ್ಯ ಶಾಸಕರುಗಳಿಗೆ ಅಭಿವೃದ್ಧಿ ಕಾಮಗಾರಿಗಳು ಪ್ರಸ್ತಾಪಿಸಲು ಕೋರಲಾಗಿತ್ತು.

| | |
|---|---|
| 1) ಮಂಡಳಿಯ ಹೊಸ ಕಾಮಗಾರಿಗಳಿಗಾಗಿ | ರೂ. 11.90 ಲಕ್ಷ |
| 2) ಪರಿಶಿಷ್ಟ ಜಾತಿ ಯೋಜನೆ ಕಾಮಗಾರಿಗಳಿಗಾಗಿ | ರೂ. 10.41 ಲಕ್ಷ |
| 3) ಪರಿಶಿಷ್ಟ ಪಂಗಡ ಯೋಜನೆ ಕಾಮಗಾರಿಗಳಿಗಾಗಿ | ರೂ. 2.69 ಲಕ್ಷ |
| 4) ನಬಾರ್ಡ ಯೋಜನೆ ಕಾಮಗಾರಿಗಳಿಗಾಗಿ | ರೂ. 7.40 ಲಕ್ಷ |
| ಒಟ್ಟು | ರೂ. 32.40 ಲಕ್ಷ |

ಮಾನ್ಯ ಶಾಸಕರುಗಳಿಂದ ಸದರಿ ಯೋಜನೆಗಳ ಕಾಮಗಾರಿಗಳ ಪ್ರಸ್ತಾವನೆಗಳನ್ನು ಪಡೆಯಲಾಗಿ ಕ್ರ.ಸಂ. 1 ರ ಯೋಜನೆಯ ಕಾಮಗಾರಿಗಳಿಗೆ ಮಂಡಳಿಯಿಂದ ಅನುಮೋದನೆ ನೀಡಲಾಗಿದೆ ಹಾಗೂ ಕ್ರ.ಸಂ. 2 ಮತ್ತು 3 ಯೋಜನೆಯ ಕಾಮಗಾರಿಗಳಿಗೆ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಯುಕ್ತ ಸಮಿತಿಯಿಂದ ಮಂಜೂರಾತಿ ಪಡೆದು ಅನುಷ್ಠಾನಕ್ಕಾಗಿ ವಹಿಸಿ ಕೊಡಲಾಗಿರುತ್ತದೆ ಕೇವಲ ನಬಾರ್ಡ ಯೋಜನೆಯ ಅನುದಾನದಲ್ಲಿನ ಕಾಮಗಾರಿಗಳಿಗೆ ಮಂಜೂರಾತಿ ನೀಡುವ ಪ್ರಕರಣ ಸರಕಾರದ ಮಟ್ಟದಲ್ಲಿ ಬಾಕಿ ಇರುತ್ತದೆ.

ದಿನಾಂಕ 27-8-2009 ರಂದು ಗುಲಬರ್ಗಾದಲ್ಲಿ ಜರುಗಿದ ಸಚಿವ ಸಂಪುಟ ಸಭೆಯಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಮಂಡಳಿಗೆ ರೂ. 10-00 ಕೋಟಿ ಹೆಚ್ಚುವರಿ ಅನುದಾನ ಮಂಜೂರು ಮಾಡಿದ ಪ್ರಯುಕ್ತ ಸರಕಾರದ ಆದೇಶ ಸಂಖ್ಯೆ: ಎಫ್‌ಡಿ/ 57/ ಬಿಆರ್‌ಎಸ್/ 2009 ದಿನಾಂಕ 5-9-2009 ರ ಮೂಲಕ ಸಹಾಯಾನುದಾನವನ್ನಾಗಿ ಪರಿಗಣಿಸಿ ಮಂಡಳಿಯ ಮುಂದುವರೆದ ಕಾಮಗಾರಿಗಳಿಗೆ ಉಪಯೋಗಿಸಲು ಸೂಚನೆ ನೀಡಲಾಗಿದೆ.

ಸದರಿ ವಿಷಯನ್ನು ಮಂಡಳಿಯ ಸರ್ವ ಸದಸ್ಯರ ಗಮನಕ್ಕೆ ತರುತ್ತಾ ಘಟನೋತ್ತರ ಅನುಮೋದನೆಗಾಗಿ ಪ್ರಸ್ತಾವನೆ ಮಂಡಿಸಲಾಗಿದೆ.

**ವಿಷಯ - 2** 2008-09 ನೇ ಸಾಲಿನ ಮಂಡಳಿಯ ವಾರ್ಷಿಕ ಲೆಕ್ಕ ಪತ್ರಗಳ ಅನುಮೋದನೆ ಬಗ್ಗೆ.

**ಟಿಪ್ಪಣೆ - 2** 2008-2009 ನೇ ಸಾಲಿನಲ್ಲಿ ಸರ್ಕಾರವು ಮಂಡಳಿಗೆ ಬಿಡುಗಡೆ ಮಾಡಿದ ಅನುದಾನ ರೂ. 16.05 ಕೋಟಿ ಹಾಗೂ ಮಂಡಳಿಯಲ್ಲಿ ಹಿಂದಿನ ವರ್ಷದಲ್ಲಿ ಖರ್ಚಾಗದೇ ಉಳಿದಿರುವ ಮೊತ್ತ ರೂ. 49.61 ಕೋಟಿ ಇದ್ದು ಒಟ್ಟು ರೂ. 65.66 ಕೋಟಿ ಒಟ್ಟು ಮೊತ್ತದಲ್ಲಿ ಮಾರ್ಚ 2009 ರ ಅಂತ್ಯದವರೆಗೆ ರೂ. 34.68 ಕೋಟಿ ಅನುದಾನವನ್ನು ವೆಚ್ಚ ಮಾಡಿ ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿವೆ. ಮಂಡಳಿಯ ನಿಯಮ 1993 ಅಧಿನಿಯಮ 8 ರ ಪ್ರಕಾರ ಸದರಿ ವೆಚ್ಚ ಲೆಕ್ಕ ಪತ್ರಗಳ ವಿವರಗಳನ್ನು ಮಂಡಳಿಯ ಸಭೆಯಲ್ಲಿ ಅನುಮೋದನೆಗಾಗಿ ಮಂಡಿಸಲಾಗಿದೆ. ಅನುಬಂಧ-1 (ಎ) ರಿಂದ (ಎಫ್) ನ್ನು ಅವಲೋಕಿಸಬಹುದು.

ವಿಷಯ - 3

ಗುಲಬರ್ಗಾ ನಗರದಲ್ಲಿ ಮಂಜೂರಾದ ಐ.ಟಿ. ಪಾರ್ಕ ಅತಿ ಶೀಘ್ರದಲ್ಲಿ ಸ್ಥಾಪನೆ ಮಾಡಿ ಕಾರ್ಯಗತಗೊಳಿಸಲು ಮಂಡಳಿಯಿಂದಲೂ ರೂ. 2.00 ಕೋಟಿ ಅನುದಾನ ಒದಗಿಸಿ ಕೊಡುವ ಕುರಿತು.

ಟಿಪ್ಪಣಿ - 3

ವ್ಯವಸ್ಥಾಪಕ ನಿರ್ದೇಶಕರು ಕ್ಯೂನಿಕ್ಸ ಬೆಂಗಳೂರು ರವರು ದಿನಾಂಕ 3-11-2009 ಪತ್ರದ ಮೂಲಕ ಗುಲಬರ್ಗಾದಲ್ಲಿ ಐ.ಟಿ ಪಾರ್ಕ ಸ್ಥಾಪನೆಯ ಕುರಿತು ಒಂದು ವಿವರವಾದ ವರದಿಯನ್ನು ಸಲ್ಲಿಸುತ್ತಾ ಇದರ ಒಟ್ಟು ಅಂದಾಜು ಮೊತ್ತ ರೂ. 9.98 ಕೋಟಿ ಇರುತ್ತದೆಂದು ನಮೂದಿಸಿರುತ್ತಾರೆ. ಸರ್ಕಾರದಿಂದ ಸದರಿ ಯೋಜನೆಗಾಗಿ ಈಗಾಗಲೆ ರೂ. 10.00 ಕೋಟಿ ಅನುದಾನ ಮಂಜೂರಾಗಿದ್ದು, ಸರ್ಕಾರದಿಂದ ಕೇವಲ ರೂ.2.00 ಕೋಟಿ ಹಣ ಮಾತ್ರ ಈ ಯೋಜನೆಗೆ ಲಭ್ಯವಿದ್ದು, ಉಳಿದ ರೂ. 8.00 ಕೋಟಿ ಹಣವನ್ನು ವ್ಯವಸ್ಥಾಪಕ ನಿರ್ದೇಶಕರು ಕ್ಯೂನಿಕ್ಸ ಬೆಂಗಳೂರು ರವರು ಸಾರ್ವಜನಿಕ ಖಾಸಗಿ ಸಹಭಾಗಿತ್ವ (ಪಿ.ಪಿ.ಪಿ.) ಮೂಲಕ ಸಂಗ್ರಹಣೆ ಮಾಡಿ ಭರಿಸಬೇಕಾಗಿದೆ. ಆದರೆ ಖಾಸಗಿ ಬಂಡವಾಳ ಹೂಡಿದಾಗ ಐ.ಟಿ. ಉದ್ಯಮಿಗಳಿಗೆ ಹೆಚ್ಚಿನ ಹೊರೆಯಾಗುತ್ತಿದೆ. ಆದುದರಿಂದ ವ್ಯವಸ್ಥಾಪಕ ನಿರ್ದೇಶಕರು ಕ್ಯೂನಿಕ್ಸ ಬೆಂಗಳೂರ ರವರು ಹೈ.ಕ.ಪ್ರ.ಮಂಡಳಿ ಹಾಗೂ ಕ್ಯೂನಿಕ್ಸ ಇವರ ಜಂಟಿ ಸಹಯೋಗದಿಂದ ಐ.ಟಿ. ಪಾರ್ಕ ತಕ್ಷಣ ಕಾರ್ಯಗತಗೊಳಿಸಲು ರೂ. 2.00 ಕೋಟಿ ಹಣವನ್ನು ಮಂಡಳಿಯಿಂದ ಮಂಜೂರು ಮಾಡಬೇಕೆಂದು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯ ಪ್ರತಿಯನ್ನು ಅನುಬಂಧ-1 ರ ಮೇಲೆ ಸಲ್ಲಿಸುತ್ತಾ, ಮಂಡಳಿಯಲ್ಲಿ ಲಭ್ಯವಿರುವ ಅನುದಾನದಲ್ಲಿ ರೂ. 2.00 ಕೋಟಿ ಹಣವನ್ನು ಮಂಜೂರು ಮಾಡಲು ಮಂಡಳಿಯ ಸರ್ವ ಸದಸ್ಯರ ಅನುಮೋದನೆಗಾಗಿ ಮಂಡಿಸಲಾಗಿದೆ.

ವಿಷಯ - 4

ಮಂಡಳಿಯ ಅಭಿವೃದ್ಧಿ ಕಾಮಗಾರಿಗಳನ್ನು ಸಕಾಲದಲ್ಲಿ ಹಾಗೂ ಗುಣಮಟ್ಟದಾಗಿ ಪೂರ್ಣಗೊಳಿಸಲು ಮಂಡಳಿಯಲ್ಲಿ 5 ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಹುದ್ದೆಗಳನ್ನು ಮಂಜೂರು ಮಾಡುವ ಕುರಿತು.

ಟಿಪ್ಪಣಿ - 4

2009-10ನೇ ಸಾಲಿಗೆ ಮುಂದುವರೆದ/ಬಾಕಿ ಉಳಿದ ಹಾಗೂ ಪೂರ್ಣಗೊಂಡ ಕಾಮಗಾರಿಗಳ ವರ್ಷವಾರು ವಿವರ.

| ವರ್ಷ | ಮುಂದುವರಿದ ಕಾಮಗಾರಿಗಳ ಸಂಖ್ಯೆ | ಪೂರ್ಣಗೊಂಡ ಕಾಮಗಾರಿಗಳ ಸಂಖ್ಯೆ | ಬಾಕಿ ಉಳಿದ ಕಾಮಗಾರಿಗಳ ಸಂಖ್ಯೆ |
|---|---|---|---|
| 2004-05 ರ ವರೆಗೆ | 106 | 94 | 12 |
| 2005-06 ರ ವರೆಗೆ | 156 | 127 | 29 |
| 2006-07 ರ ವರೆಗೆ | 223 | 179 | 44 |
| 2007-08 ರ ವರೆಗೆ | 461 | 314 | 147 |
| 2008-09 ರ ವರೆಗೆ | 678 | 30 | 348 |
| ಒಟ್ಟು | 1624 | 1044 | 580 |

ಈ ಮೇಲಿನ ತ:ಖ್ತೆಯಲ್ಲಿನ ಕಾಮಗಾರಿಗಳ ವಿವರಗಳನ್ನು ಪರಿಶೀಲಿಸಿದರೆ ಸರ್ಕಾರದ ಮಾರ್ಗಸೂಚಿಯಂತೆ ಮಂಜೂರಾದ ವರ್ಷದಲ್ಲಿಯೇ ಪೂರ್ಣಗೊಳಿಸದೆ ಸುಮಾರು 5 ವರ್ಷಗಳ ಅವಧಿಯಲ್ಲಿನ 580 ಕಾಮಗಾರಿಗಳು ಬಾಕಿ ಉಳಿದಿದ್ದು ಕಂಡು ಬಂದಿರುತ್ತದೆ. ಇದು ಮಂಡಳಿಯ ಕಾಮಗಾರಿಗಳು ಬೇರೆ ಏಜನ್ಸಿಯವರಿಗೆ ಅನುಷ್ಠಾನಕ್ಕಾಗಿ ವಹಿಸಿಕೊಟ್ಟ ಕಾರಣದಿಂದ ಸಕಾಲದಲ್ಲಿ ಪೂರ್ಣಗೊಳಿಸಲು ಸಾಧ್ಯವಾಗುತ್ತಿಲ್ಲ.

ಆದುದರಿಂದ ಮಂಡಳಿಯ ಕಾಮಗಾರಿಗಳನ್ನು ಸಕಾಲದಲ್ಲಿ ನಿರ್ವಹಿಸಲು ಮಂಡಳಿಯ ಐದು ಜಿಲ್ಲೆಗಳಿಗೆ ಐದು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರನ್ನು ನೇರವಾಗಿ ನಿಯೋಜಿಸಿ ಮಂಡಳಿ ಕೆಲಸಗಳನ್ನು ಕೈಗೆತ್ತಿಕೊಳ್ಳಲು ಅಧಿಕಾರ ವಹಿಸಿ ಕೊಡುವುದು ಸೂಕ್ತ. ಕಾರಣ ಸದರಿ ವಿಷಯದ ಕುರಿತು ಮಂಡಳಿಯ ಸರ್ವ ಸದಸ್ಯರ ಒಪ್ಪಿಗೆಗಾಗಿ ಮಂಡಿಸಲಾಗಿದೆ.

**ವಿಷಯ – 5** ಅಭಿಯಂತರರ ಸೇವೆಗಳನ್ನು ಪಡೆಯುವ ಕುರಿತು

**ಟಿಪ್ಪಣಿ – 5** ಶ್ರೀ ಹನುಮಂತ ಎನ್. ಕನಿಹಾಳ ಬಿ,ಇ. ಅಧ್ಯಕ್ಷರು The Institution of Engineers (India) ಲೋಕಲ್ ಸೆಂಟರ ಗುಲಬರ್ಗಾ ಇವರು ಪತ್ರ ದಿನಾಂಕ 16–11–2009 ರ ಮೂಲಕ ಮಂಡಳಿಗೆ ಪ್ರಸ್ತಾವನೆ ಸಲ್ಲಿಸುತ್ತಾ, ಮಂಡಳಿಯ ಕಾಮಗಾರಿಗಳಿಗೆ ಉಸ್ತುವಾರಿ ಹಾಗೂ ಗುಣಮಟ್ಟವನ್ನು ಪರಿಶೀಲಿಸಲು ಅವರ ಕೇಂದ್ರದ ಪರಿಣಿತ ಅಭಿಯಂತರರ ಸೇವೆಯನ್ನು ಪಡೆಯಲು ಕೋರಿರುತ್ತಾರೆ. ಕಾರಣ ಸರ್ವ ಸದಸ್ಯರ ಒಪ್ಪಿಗೆ ಇದ್ದಲ್ಲಿ ಸದರಿ ಸಂಸ್ಥೆಯ ಅಭಿಯಂತರರ ಸೇವೆಗಳನ್ನು 3ನೇ ಸಮೀಕ್ಷಾ ತಂಡವಾಗಿ ಪಡೆದು ಮಂಡಳಿಯ ಕಾಮಗಾರಿಗಳ ಗುಣಮಟ್ಟ ಉತ್ತಮಗೊಳಿಸಬಹುದಾಗಿದೆ. ಈ ವಿಷಯವನ್ನು ಮಂಡಳಿಯ ಸರ್ವ ಸದಸ್ಯರ ಅನುಮೋದನೆಗಾಗಿ ಸಲ್ಲಿಸಲಾಗಿದೆ.

**ವಿಷಯ – 6** ಹೈದ್ರಾಬಾದ ಕರ್ನಾಟಕ ಪ್ರದೇಶಕ್ಕೆ "ಕಲ್ಯಾಣ ಕರ್ನಾಟಕ" ವೆಂದು ನಾಮಕರಣ ಮಾಡುವ ಕುರಿತು.

**ಟಿಪ್ಪಣಿ – 6** ದಿನಾಂಕ 17–9–2009 ರಂದು ಮಾನ್ಯ ಮುಖ್ಯ ಮಂತ್ರಿಯವರು ಗುಲಬರ್ಗಾದಲ್ಲಿ ಹೈದ್ರಾಬಾದ ಕರ್ನಾಟಕ ವಿಮೋಚನಾ ದಿನಾಚರಣೆ ಅಂಗವಾಗಿ ಮಾತನಾಡುತ್ತಾ, ಹೈದ್ರಾಬಾದ ಕರ್ನಾಟಕ ಪ್ರದೇಶವನ್ನು "ಕಲ್ಯಾಣ ಕರ್ನಾಟಕ" ವೆಂದು ಕರೆಯುವದು ಸೂಕ್ತವೆಂಬ ವ್ಯಯಕ್ತಿಕ ಅಭಿಪ್ರಾಯವನ್ನು ಸನ್ಮಾನ್ಯ ಮುಖ್ಯ ಮಂತ್ರಿಯವರು ಮಂಡಿಸಿದರು. ಈ ಭಾಗದ ಜನಪ್ರತಿನಿಧಿಗಳು, ಗಣ್ಯರು, ಮುತ್ಸದ್ದಿಗಳು ಒಟ್ಟಾಗಿ ಚರ್ಚಿಸಿ ಒಮ್ಮತಾಭಿಪ್ರಾಯದ ವರದಿಯನ್ನು ಸರಕಾರಕ್ಕೆ ಸಲ್ಲಿಸಿದಲ್ಲಿ ಮುಂದಿನ ನಿರ್ಧಾರ ಸರ್ಕಾರದ ಮಟ್ಟದಲ್ಲಿ ಕೈಗೊಳ್ಳುವುದಾಗಿಯೂ ಅವರು ಭರವಸೆ ನೀಡಿದರು. ಕಾರಣ ಮಂಡಳಿಯ ಸರ್ವ ಸದಸ್ಯರ ಒಪ್ಪಿಗೆ ಇದ್ದಲ್ಲಿ ಈ ವಿಷಯ ಕುರಿತು ಸರ್ಕಾರಕ್ಕೆ ಮಂಡಳಿಯ ವತಿಯಿಂದ ಒಂದು ಪ್ರಸ್ತಾವನೆಯನ್ನು ಸಲ್ಲಿಸಬಹುದಾಗಿದೆ.

ವಿಷಯ – 7

ಭಾರತ ಸಂವಿಧಾನದ ಕಲಂ 371 ಕ್ಕೆ ತಿದ್ದುಪಡಿ ತರಲು ರಾಜ್ಯ ಸರ್ಕಾರಕ್ಕೆ ಮನವಿ ಕುರಿತು.

ಟಿಪ್ಪಣಿ – 7

ಕಳೆದ ಸುಮಾರು ವರ್ಷಗಳಿಂದ ಹಿಂದುಳಿದ ಹೈದ್ರಾಬಾದ ಕರ್ನಾಟಕ ಪ್ರದೇಶದ ಸಮಗ್ರ ಅಭಿವೃದ್ಧಿ ಸಾಧಿಸಲು ಸಂವಿಧಾನದ ಕಲಂ 371 ಕ್ಕೆ ತಿದ್ದುಪಡಿಗಾಗಿ ಕೇಂದ್ರ ಸರ್ಕಾರದ ಮೇಲೆ ಒತ್ತಡ ತರುವುದು ಅನಿವಾರ್ಯವಾಗಿದೆ. ಮಹಾರಾಷ್ಟ್ರದ ವಿದರ್ಭ ಮಾದರಿ, ಆಂದ್ರ ಪ್ರದೇಶದ ತೆಲಂಗಾಣ ಮಾದರಿಯಂತೆ ಹೈದ್ರಾಬಾದ ಕರ್ನಾಟಕ ಪ್ರದೇಶದಲ್ಲಿಯೂ ಕೇಂದ್ರ ಸರ್ಕಾರದ ವಿಶೇಷ ಯೋಜನೆಯನ್ನು ಜಾರಿಗೆ ತಂದರೆ ಮಾತ್ರ ನಿಜಾಮರ ಆಡಳಿತದಲ್ಲಿದ್ದ ಎಲ್ಲಾ ಹಿಂದುಳಿದ ಪ್ರದೇಶಗಳಿಗೆ ಸರಿಸಮನಾದ ನ್ಯಾಯ ದೊರಕಿಂತಾಗುತ್ತದೆ.

ಆದ್ದರಿಂದ ಹಿಂದುಳಿದ ಹೈದ್ರಾಬಾದ ಕರ್ನಾಟಕ ಪ್ರದೇಶಕ್ಕೆ ರಾಜ್ಯ ಸರ್ಕಾರದ ವಿಶೇಷ ಅಭಿವೃದ್ಧಿ ಯೋಜನೆಯೊಂದಿಗೆ ಕೇಂದ್ರ ಸರ್ಕಾರದಿಂದಲೂ ಒಂದು ವಿಶೇಷ ಅಭಿವೃದ್ಧಿ ಪ್ಯಾಕೇಜನ್ನು ಪಡೆದುಕೊಳ್ಳಲು ಸರ್ವ ಸದಸ್ಯರು ಸರ್ವಾನುಮತದ ಒಪ್ಪಿಗೆ ನೀಡಿದಲ್ಲಿ ಸನ್ಮಾನ್ಯ ಮುಖ್ಯ ಮಂತ್ರಿಗಳಿಗೆ ಮಂಡಳಿ ವತಿಯಿಂದ ಪ್ರಸ್ತಾವನೆ ಸಲ್ಲಿಸಲಾಗುವುದು.

ವಿಷಯ – 8

ಹೈದ್ರಾಬಾದ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯಿಂದ ತೆಗೆದುಕೊಳ್ಳುವ ಕಾಮಗಾರಿಗಳಿಗೆ ತುಂಡು ಗುತ್ತಿಗೆ ಮಂಜೂರಾತಿ ನೀಡುವ ಅಧಿಕಾರದ ಮರು ಹಂಚಿಕೆಯ ಬಗ್ಗೆ.

ಟಿಪ್ಪಣಿ – 8

ಹೈದ್ರಾಬಾದ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ ವಿವಿಧ ಅಭಿವೃದ್ಧಿ ಕಾಮಗಾರಿಗಳು ಮಂಡಳಿಯ ಸದಸ್ಯರ ಶಫಾರಸ್ಸಿನ ಮೇರೆಗೆ ಮಂಜೂರಾತಿ ಪಡೆಯುತ್ತಿದ್ದು, ಸದರಿ ಕಾಮಗಾರಿಗಳ ಅಂದಾಜು ಪತ್ರಿಕೆಗಳು ಪರಿಶೀಲಿಸಲಾಗಿ ಪ್ರತಿಶತ 90 ರಷ್ಟು ಕಾಮಗಾರಿಗಳು ರೂ.5.00 ಲಕ್ಷ ಮೊತ್ತದ ಮಿತಿಯಲ್ಲಿರುವುದು ಗಮನಿಸಲಾಗಿದೆ. ಸದರಿ ಕಾಮಗಾರಿಗಳು ಅನುಷ್ಠಾನಗೊಳಿಸುವ ಸಂದರ್ಭದಲ್ಲಿ ರೂ.5.00 ಲಕ್ಷ ಮೊತ್ತದ ಕಾಮಗಾರಿಗಳು ತುಂಡು ಗುತ್ತಿಗೆ ಆಧಾರದ ಮೇಲೆ ಅನುಷ್ಠಾನಗೊಳಿಸಬಹುದಾಗಿದ್ದರೂ ಕೂಡಾ ಪ್ರಸ್ತಾವನೆಗಳು ಸಂಬಂಧಪಟ್ಟ ಮುಖ್ಯ ಅಭಿಯಂತರರ ಅನುಮೋದನೆ ಪಡೆಯಬೇಕಾಗಿರುತ್ತದೆ. ಮಂಡಳಿಯ ಸದಸ್ಯರಿಂದ ಶಿಫಾರಸ್ಸುಗೊಂಡ ಕಾಮಗಾರಿಗಳ ಅಂದಾಜು ಪತ್ರಿಕೆಗಳನ್ನು ತಯ್ಯಾರಿಸಿ ಉಪ ವಿಭಾಗಗಳಿಂದ ವಿಭಾಗಕ್ಕೆ, ವಿಭಾಗದಿಂದ ವೃತ್ತ ಕಚೇರಿಗೆ, ವೃತ್ತ ಕಚೇರಿಯಿಂದ ಮುಖ್ಯ ಅಭಿಯಂತರರಿಗೆ ಸಲ್ಲಿಸಿ ಅನುಮೋದನೆ ಪಡೆಯುವ ಸಮಯಕ್ಕೆ ಆರ್ಥಿಕ ವರ್ಷ ಪೂರ್ಣಗೊಂಡಿರುತ್ತದೆ.

ಆದ್ದರಿಂದ ರೂ.5.00 ಲಕ್ಷ ಮೊತ್ತದವರೆಗಿನ ಅಭಿವೃದ್ಧಿ ಕಾಮಗಾರಿಗಳ ತುಂಡು ಗುತ್ತಿಗೆಯ ಮಂಜೂರಾತಿ ಅಧಿಕಾರವನ್ನು ಕಾರ್ಯನಿರ್ವಾಹಕ ಅಭಿಯಂತರರಿಗೆ ಹಸ್ತಾಂತರಿಸಿದಲ್ಲಿ ನಿರೀಕ್ಷಿತ ಹಾಗೂ ನಿಗದಿತ ಅವಧಿಯಲ್ಲಿ ಕಾಮಗಾರಿಗಳ ಅನುಷ್ಠಾನ ಮಾಡಬಹುದಾಗಿದೆ. ಸದರಿ ವಿಷಯವನ್ನು ಸರ್ವ ಸದಸ್ಯರ ಒಪ್ಪಿಗೆಗಾಗಿ ಮಂಡಿಸಲಾಗಿದೆ.

| | |
|---|---|
| ವಿಷಯ – 9 | ಸಹಕಾರಿ ಸಕ್ಕರೆ ಕಾರ್ಖಾನೆ ಹಳ್ಳಿಖೇಡ, ಬೀದರ, ಭೂಸನೂರ ಹಾಗೂ ನೂಲಿನ ಗಿರಣಿ ರಾಯಚೂರ ಇವರಿಗೆ ಬಿಡುಗಡೆ ಮಾಡಿರುವ ಸಾಲ ವಸೂಲಾತಿಯ ಬಗ್ಗೆ. |
| ಟಿಪ್ಪಣಿ – 9 | ಈ ಹಿಂದೆ ದಿನಾಂಕ 8–12–2008 ರ ಸಭೆಯ ತೀರ್ಮಾನದಂತೆ ಮಂಡಳಿ ವತಿಯಿಂದ ಭೂಸನೂರ ಸಹಕಾರಿ ಸಕ್ಕರೆ ಕಾರ್ಖಾನೆ ಆಳಂದ ತಾಲೂಕ, ನಾರಂಜಾ ಸಹಕಾರ ಸಕ್ಕರೆ ಕಾರ್ಖಾನೆ ಹಳ್ಳಿಖೇಡ (ಬಿ) ಬೀದರ ತಾಲೂಕ ಹಾಗೂ ನೂಲಿನ ಗಿರಣಿ, ರಾಯಚೂರ ಇವರಿಗೆ 1991–92 ರಲ್ಲಿ ನೀಡಲಾದ ರೂ.1260.00 ಲಕ್ಷ ಸಾಲವನ್ನು ಸಹಕಾರಿ ಇಲಾಖೆಯಿಂದ ಮರು ಪಾವತಿಸುವಂತೆ ಕ್ರಮ ಜರುಗಿಸಲಾಗಿದೆ. ಆದರೆ ಇದುವರೆಗೆ ಯಾವುದೇ ಹಣ ಮಂಡಳಿಗೆ ಸ್ವೀಕೃತಿಯಾಗಿರುವುದಿಲ್ಲ. ಈ ವಿಷಯವನ್ನು ಮಂಡಳಿಯ ಸರ್ವ ಸದಸ್ಯರ ಗಮನಕ್ಕೆ ಹಾಗೂ ತೀರ್ಮಾನಕ್ಕೆ ಮಂಡಿಸಲಾಗಿದೆ. |
| ವಿಷಯ – 10 | ಮಂಡಳಿಯ ಅನುದಾನದಲ್ಲಿ ನಿರ್ಮಾಣಗೊಂಡ ಸಮುದಾಯ ಭವನಗಳ ಕುರಿತು. |
| ಟಿಪ್ಪಣಿ – 10 | ಹೈದ್ರಾಬಾದ ಕರ್ನಾಡಕ ಪ್ರದೇಶಾಭಿವೃದ್ಧಿ ಮಂಡಳಿಯ ಅನುದಾನದಲ್ಲಿ 2000–2009 ನೇ ಸಾಲಿನವರೆಗೆ ರೂ.39.35 ಕೋಟಿ ವೆಚ್ಚ ಮಾಡಿ ಸುಮಾರು 1906 ಸಮುದಾಯ ಭವನ/ಸಾಂಸ್ಕೃತಿಕ ಭವನ/ಕಲ್ಯಾಣ ಮಂಟಪಗಳು ನಿರ್ಮಾಣಗೊಂಡಿರುತ್ತವೆ. ಇಂತಹ ಕಟ್ಟಡಗಳ ಕುರಿತು 2008–09 ನೇ ಸಾಲಿನಲ್ಲಿ ಸುಮಾರು 39 ಕಟ್ಟಡಗಳ ಒಂದು ಮಾದರಿ ಸಮೀಕ್ಷೆ ನಡೆಸಲಾಗಿ, ಇದರಲ್ಲಿ 15 ಕಟ್ಟಡಗಳು ಗ್ರಾಮ ಪಂಚಾಯತಿಗೆ ಹಸ್ತಾಂತರಿಸಲಾಗಿದೆ ಮತ್ತು 14 ಕಟ್ಟಡಗಳು ಖಾಸಗಿ ಸಂಘ/ವ್ಯಕ್ತಿಗಳ ಸ್ವಾಧೀನದಲ್ಲಿರುವುದು ಕಂಡು ಬಂದಿರುತ್ತದೆ. ಒಟ್ಟಾರೆ ಕಟ್ಟಡಗಳ ಸದುಪಯೋಗ ತೃಪ್ತಿಕರವಾಗಿರುವುದಿಲ್ಲ. ಸದರಿ ಕಟ್ಟಡಗಳ ಸರಾಸರಿ ಅಂದಾಜು ಮೊತ್ತ ರೂ.2.00 ಲಕ್ಷವಿದ್ದು, ಇಂತಹ ಕಟ್ಟಡಗಳು ಗ್ರಾಮಗಳಲ್ಲಿ ಸಣ್ಣ ಪುಟ್ಟ ಕಾರ್ಯಕ್ರಮಗಳಿಗೆ ಉಪಯೋಗವಾಗದಿರುವುದು ಹಾಗೂ ಸಾರ್ವಜನಿಕರಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಿಕೊಡಲು ಸಾಧ್ಯವಾಗದಿರುವುದು ಕೂಡಾ ಗಮನಿಸಲಾಗಿದೆ.<br><br>ಆದ್ಧರಿಂದ ಮಂಡಳಿಯ ಅನುದಾನದಲ್ಲಿ ಈ ರೀತಿಯ ಸಣ್ಣ–ಪುಟ್ಟ ಸಮುದಾಯ/ಸಾಂಸ್ಕೃತಿಕ ಭವನಗಳ ನಿರ್ಮಾಣ ಕೈಗೊಳ್ಳದಿರುವುದು ಸೂಕ್ತವೆಂಬ ವಿಷಯವನ್ನು ಮಂಡಳಿಯ ಸರ್ವ ಸದಸ್ಯರ ಮಾಹಿತಿಗಾಗಿ ಹಾಗೂ ಸೂಕ್ತ ತೀರ್ಮಾನಕ್ಕಾಗಿ ಮಂಡಿಸಲಾಗಿದೆ. |

ವಿಷಯ – 11 2010–2011 ನೇ ಸಾಲಿಗಾಗಿ ಒದಗಿಸಿ ಕೊಟ್ಟ ರೂ. 2300.00 ಲಕ್ಷ ಮೊತ್ತದ ಕ್ರಿಯಾ ಯೋಜನೆ ತಯಾರಿಸುವ ಕುರಿತು.

ಟಿಪ್ಪಣಿ – 11 ಈಗಾಗಲೆ 2010–11 ನೇ ಸಾಲಿಗಾಗಿ ಸರ್ಕಾರವು ಮಂಡಳಿಗೆ ಗೊತ್ತುಪಡಿಸಿದ ಅನುದಾನ ರೂ. 2300.00 ಲಕ್ಷವಿರುವುದು ತಿಳಿದು ಬಂದಿದೆ. ಅದರ ವಿವರಗಳು ಈ ಕೆಳಗಿನಂತಿರುತ್ತವೆ.

| ಸಂ. | ಅನುದಾನ ವಿವರ | ಒಟ್ಟು ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|
| 1. | ಮಂಡಳಿ ಅಭಿವೃದ್ಧಿ ಕಾಮಗಾರಿಗಳಿಗಾಗಿ | 1600 |
| 2. | ಎಸ್.ಸಿ.ಪಿ. ಕಾಮಗಾರಿಗಳಿಗಾಗಿ | 400 |
| 3. | ಟಿ.ಎಸ್.ಪಿ. ಕಾಮಗಾರಿಗಳಿಗಾಗಿ | 170 |
| 4. | ಆಡಳಿತ ವೆಚ್ಚಕ್ಕಾಗಿ | ~~2300~~ 130 |
| ಒಟ್ಟು | | 2300 |

ಕಾರಣ ಸರ್ಕಾರದ ಮಾರ್ಗಸೂಚಿಗಳ ಪ್ರಕಾರ ಸದರಿ ಮೊತ್ತದಲ್ಲಿ ಅಭಿವೃದ್ಧಿ ಕಾಮಗಾರಿಗಳ ಕ್ರಿಯಾ ಯೋಜನೆಯನ್ನು ತಯ್ಯಾರಿಸುವ ವಿಷಯವನ್ನು ಮಂಡಳಿಯ ಸರ್ವ ಸದಸ್ಯರ ತೀರ್ಮಾನಕ್ಕಾಗಿ ಮಂಡಿಸಲಾಗಿದೆ.

ವಿಷಯ – 12 ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರೆ ವಿಷಯಗಳು.

ಶಾ:

ಡಾ. ಶಾಲಿನಿ ರಜನೀಶ. ಭಾ.ಆ.ಸೇ.
ಕಾರ್ಯದರ್ಶಿಗಳು
ಹೈದ್ರಾಬಾದ ಕರ್ನಾಟಕ ಪ್ರದೇಶಾಭಿವೃದ್ಧಿ
ಮಂಡಳಿ

ಅಭಿವೃದ್ಧಿ ಭವನ, ಐವಾನ್-ಎ-ಶಾಹಿ, ಗುಲಬರ್ಗಾ-2
ಕಛೇರಿ : 08472 - 256767
ನಿವಾಸ : 08472 - 249821
ಫ್ಯಾಕ್ಸ್ : 08472 - 227527
E-mail : hkadb_gul.@yahoo.co.in

ಅ.ಸ.ಪ.ಸಂಖ್ಯೆ:ಹೈಕಪ್ರಮಂ/ಯೋ-1/30/2009-2010 ದಿನಾಂಕ 8-3-2010

ಮಾನ್ಯರೇ,

ವಿಷಯ:- ದಿನಾಂಕ 16-2-2010 ರಂದು ಮಾನ್ಯ ಶ್ರೀ ಗೋವಿಂದ .ಎಂ. ಕಾರಜೋಳ ಸಣ್ಣ ನೀರಾವರಿ ಹಾಗೂ ಸಾಂಖ್ಯಿಕ ಸಚಿವರ ಅಧ್ಯಕ್ಷತೆಯಲ್ಲಿ ಬೆಂಗಳೂರಿನಲ್ಲಿ ನಡೆದ ಹೈ.ಕ.ಪ್ರ.ಮಂಡಳಿ ಪ್ರಗತಿ ಪರಿಶೀಲನೆ ಸಭೆಯ ತೀರ್ಮಾನಗಳನ್ನು ಅನುಷ್ಠಾನಗೊಳಿಸುವ ಕುರಿತು.

***

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಸಭೆಯಲ್ಲಿನ ನಿರ್ಣಯದ ಮುಖ್ಯಾಂಶಗಳನ್ನು ಅನುಷ್ಠಾನಗೊಳಿಸಲು ತಮ್ಮ ಆದ್ಯ ಗಮನಕ್ಕೆ ಸಲ್ಲಿಸಲಾಗಿದೆ.

1] ಮಂಡಳಿಯ ಕಾಮಗಾರಿ ಕುರಿತು ಶೀಘ್ರವಾಗಿ ಪೂರ್ತಿಗೊಳಿಸುವ ದೃಷ್ಟಿಯಿಂದ ರೂ. 5.00 ಲಕ್ಷ ರೂಪಾಯಿವರೆಗೆ ತುಂಡು ಗುತ್ತಿಗೆ ಮಂಜೂರಾತಿ ನೀಡುವ ಅಧಿಕಾರವನ್ನು ಮುಖ್ಯ ಅಭಿಯತರರಿಂದ ಕಾರ್ಯನಿವಾಹಕ ಅಭಿಯಂತರರಿಗೆ ನೀಡಲು ಲೋಕೋಪಯೋಗಿ ಸಚಿವರಿಗೆ ಕೋರಬಹುದಾಗಿದೆ.

2] ಒಂದೇ ವಲಯಕ್ಕೆ ಸೇರಿರುವ 5.00 ಲಕ್ಷ ರೂಪಾಯಿ ವರೆಗಿನ ಕಾಮಗಾರಿ ಬದಲಾವಣೆ ಮಾಡುವ ಅಧಿಕಾರ ಮಾತ್ರ ಮಂಡಳಿಗೆ ಇದ್ದು ಮಾನ್ಯ ಶಾಸಕರುಗಳು ಸಲ್ಲಿಸುವ ರೂ. 5.00 ಲಕ್ಷ ಮೇಲ್ಪಟ್ಟ ಹಾಗೂ ಬೇರೆ ವಲಯಕ್ಕೆ ಸೇರಿರುವ ಕಾಮಗಾರಿಗಳಿದ್ದರೆ ಸರಕಾರಕ್ಕೆ ಪ್ರಸ್ತಾಪಿಸಿ ಬದಲಾವಣೆ ಪಡೆಯುವಲ್ಲಿ ಬಹಳ ವಿಳಂಬವಾಗುತ್ತಿದ್ದು, ಆದುದರಿಂದ ಕಾಮಗಾರಿ ಬದಲಾವಣೆಯ ಸಂಪೂರ್ಣ ಅಧಿಕಾರ ಮಂಡಳಿ ಕಾರ್ಯದರ್ಶಿಯವರಿಗೆ ವಹಿಸಿಕೊಡಲು ಸೂಕ್ತ ಆದೇಶ ನೀಡಲು ಕೋರಲಾಗಿದೆ.

3] ಮಂಡಳಿಯ ಅನುದಾನದಲ್ಲಿ 3 ಸಕ್ಕರೆ ಕಾರ್ಖಾನೆ ಹಾಗೂ ಒಂದು ನೂಲಿನ ಗಿರಣಿಗೆ ನೀಡಿದ ಸಾಲದ ಹಣ ರೂ. 12.60 ಕೋಟಿ ಮೊತ್ತವನ್ನು ಸಹಕಾರ ಇಲಾಖೆಯಿಂದ ಮಂಡಳಿಗೆ ಮುರು ಪಾವತಿಸುವ ಕುರಿತು ಸಹಕಾರ ಇಲಾಖೆಗೆ ಕೋರಬಹುದಾಗಿದೆ.

4] ಪ್ರಸಕ್ತ ಸಾಲಿಗಾಗಿ ನಬಾರ್ಡ ಯೋಜನೆಗೆ ಒದಿಸಿದ ರೂ. 3.10 ಕೋಟಿ ಅನುದಾನವನ್ನು ಬಳಕೆಯಾಗದ ಪ್ರಯುಕ್ತ ಸದರಿ ಅನುದಾನದ ಲೆಕ್ಕ ಶೀರ್ಷಿಕೆಯನ್ನು ಬದಲಾವಣೆ ಮಾಡಿ ಶಾಸಕರು ಪ್ರಸ್ತಾಪಿಸಿದ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಅನುವು ಮಾಡಿಕೊಡಲು ಕೋರಲಾಗಿದೆ.

5] ಹಿಂದಿನ ವರ್ಷಗಳಲ್ಲಿ ಮಂಜೂರಾಗಿ, ಸ್ಥಳ ತೊಂದರೆ ಹಾಗೂ ಇತರೆ ಕಾರಣಗಳಿಂದ ಕೈಬಿಡಲಾದ ಕಾಮಗಾರಿಗಳ ಉಳಿತಾಯದ ಅನುದಾನದಲ್ಲಿ ಆದ್ಯತೆಯ ಮೇರೆಗೆ (ಮಾನ್ಯ ಶಾಸಕರಿಂದ ಪ್ರಸ್ತಾವನೆಗಳನ್ನು ಪಡೆದು) ಅಪೂರ್ಣಗೊಂಡ ಕಾಮಗಾರಿಗಳು ಪೂರ್ಣಗೊಳಿಸಲು ಅಥವಾ ಹೊಸ ಕಾಮಗಾರಿಗಳನ್ನು ಮಂಜೂರು ಮಾಡಲು ಮಾನ್ಯ ಯೋಜನಾ ಸಚಿವರು ಸೂಚಿಸಿರುವ ಹಿನ್ನೆಲೆಯಲ್ಲಿ ಮಾನ್ಯ ಶಾಸಕರುಗಳಿಗೆ ಈ ಕುರಿತು ಪತ್ರ ಸಂಖ್ಯೆ:ಹೈಕಪ್ರಮಂ/ಯೋ-1/3/2009-2010 ದಿನಾಂಕ 18-2-2010 ರಂದು ಬರೆಯಲಾಗಿದೆ.

6] ವಲಯವಾರು ಹಂಚಿಕೆಯ ಪ್ರಕಾರ ಪ್ರತಿಶತ 25 ರಷ್ಟು ಅನುದಾನವನ್ನು ಭೂ ಅಂತರ್ಜಲ ಅಭಿವೃದ್ಧಿ ಹಾಗೂ ಅರಣ್ಯ ಕಾಮಗಾರಿಗಳಿಗೆ ಒದಗಿಸಬೇಕಾಗುತ್ತದೆ. ಆದರೆ NREGA ಅನುದಾನದಲ್ಲಿ ಸದರಿ ಕಾಮಗಾರಿಗಳು ಕೈಗೆತ್ತಿಕೊಳ್ಳಲಾಗುತ್ತಿವೆ. ಕಾರಣ ಮಾರ್ಗಸೂಚಿಯಲ್ಲಿನ ಈ ಷರತ್ತುಗಳನ್ನು ತೆಗೆದುಹಾಕಿ ಮಾನ್ಯ ಶಾಸಕರುಗಳು ಪ್ರಸ್ತಾಪಿಸಿದ ರಸ್ತೆ ಮತ್ತು ಸೇತುವೆ ಹಾಗೂ ಸಾಮಾಜಿಕ ವಲಯದ ಅವಶ್ಯ ಕಾಮಗಾರಿಗಳನ್ನು ಮಂಜೂರು ಮಾಡುವ ಮಾರ್ಗಸೂಚನೆ ಜಾರಿಗೊಳಿಸುವದು ಸೂಕ್ತವೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಲಾಗಿದೆ.

ಸದರಿ ಪ್ರಸ್ತಾಪಿಸಿದ ವಿಷಯಗಳ ಕುರಿತು ಸೂಕ್ತ ಮಂಜೂರಾತಿ ನೀಡಲು ಕೋರಲಾಗಿದೆ.

ಗೌರವಗಳೊಂದಿಗೆ,

ತಮ್ಮ
ಸಹಿ
(ಡಾ: ಶಾಲಿನಿ ರಜನೀಶ)

ಶ್ರೀ ಸಂಜೀವಕುಮಾರ, ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿಗಳು
ಯೋಜನೆ ಕಾರ್ಯಕ್ರಮ ಸಂಯೋಜನೆ
ಹಾಗೂ ಸಾಂಖ್ಯಿಕ ಇಲಾಖೆ
ಬಹುಮಹಡಿಗಳ ಕಟ್ಟಡ
ಬೆಂಗಳೂರು.

ಶಾ: